ಚಿಂತಾಮಣಿ ಚೇಳೂರು ರಸ್ತೆ ಹಾಗೂ ರಾಜ್ಯ ಹೆದ್ದರಿ ೫೮ (ಎಂ.ಜಿ.ರಸ್ತೆ). ದುರಸ್ತಿಯಾಗುವ ಹಾಗೂ ದುಸ್ಥಿತಿಯಲ್ಲಿರುವ ರಸ್ತೆಗಳು ಯಾವುದೂ ಇರುವುದಿಲ್ಲ.

ಪೂರ್ಣವಾಗಿ ರಸ್ತೆ ಡಾಂಬರೀಕರಣ ಮಾಡಲಾಗಿದೆ. ೨೦೦೦-೦೧ನೇ ಸಾಲಿನಲ್ಲಿ ಈ ಯೋಜನೆಗೆ ರೂ.೮.೭೫ ಲಕ್ಷಗಳು ವೆಚ್ಚವಾಗಿರುತ್ತದೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ಸರ್ಕಾರದವರು ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದ್ದಾರೆ. ಉತ್ತರದಲ್ಲಿ ೨೦೦೦-೦೧ನೇ ಸಾಲಿನಲ್ಲಿ ಈ ಯೋಜನೆಗೆ ರೂಪಾಯಿ ೮.೭೫ ಲಕ್ಷಗಳು ರೋಡುಗಳನ್ನು ಸರಿಪಡಿಸಲು ವೆಚ್ಚವಾಗಿರುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲಿ ಏನಾಗಿದೆ ಅಂದರೆ, ನಮ್ಮ ಚಿಂತಾಮಣಿ ತಾಲ್ಲೂಕಿನಲ್ಲಿ ಬಿಸಿನೆಸ್ ಜಾಸ್ತಿ, ಅಲ್ಲಿ ಈ ಕಡೆ ಆ ಕಡೆ ಜಾಸ್ತಿ ಬಿಲ್ಡಿಂಗ್ಸ್ ಬಂದಿರುವುದರಿಂದ ರೋಡುಗಳ ಸೆಂಟ್ರಲ್‌ನಲ್ಲಿ ನೀರು ನಿಂತು ಹೋಗುತ್ತದೆ. ಅದಕ್ಕೋಸ್ಕರವಾಗಿ ನಾನು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ ತಾವು ಮೊದಲು ಡ್ರೈನ್ಸ್ ಮಾಡದೇ ಇದ್ದರೆ ಉಪಯೋಗವಿಲ್ಲ. ಇವತ್ತು ಇಷ್ಟು ದುಡ್ಡು ಖರ್ಚು ಮಾಡಿದರೂ ಮಧ್ಯೆ ಮಧ್ಯೆ ರೋಡುಗಳಲ್ಲಿ ಗುಂಡಿ ಬಿದ್ದಿವೆ, ಮಳೆ ಬಂದರೆ ಡ್ರೈನ್ಸ್ ಇಲ್ಲದೇ ಇರುವುದರಿಂದ ನೀರು ಅಲ್ಲಲ್ಲಿ ನಿಂತು ಹೋಗುತ್ತದೆ. ಇವತ್ತು ಬಹಳ ಕಡೆ ರೋಡ್ ಹಾಳಾಗಿವೆ. ನೀವು ಇಷ್ಟು ದುಡ್ಡು ಖರ್ಚು ಮಾಡಿದರೂ ವೇಸ್ಟ್ ಆಗುತ್ತಾ ಇದೆ. ತಾವು ದಯವಿಟ್ಟು ಡ್ರೈನ್ಸ್ ಮಾಡಬೇಕು. ಅಲ್ಲಿ ಇಲ್ಲಿ ಸ್ವಲ್ಪ ಟಾರ್ ಎದ್ದು ಹೋಗಿರುವುದರಿಂದ ಹೆಚ್ಚು ತೊಂದರೆ ಆಗಿದೆ, ಅಲ್ಲಿ ಡಾಂಬರೀಕರಣ ಮಾಡಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ೮.೭೫ ಲಕ್ಷ ರೂಪಾಯಿಗಳನ್ನು ಅವರ ಕ್ಷೇತ್ರದಲ್ಲಿ ನಗರಸಭೆ ಆವರಣದಲ್ಲಿರತಕ್ಕ ರಸ್ತೆಗೆ ಖರ್ಚು ಮಾಡಿದ್ದೇವೆ. ಇವತ್ತು ಎಲ್ಲಾ ಕಡೆ ಡ್ರೈನ್ಸ್ ಮಾಡೇ ರಸ್ತೆಗಳನ್ನು ಮಾಡಬೇಕೆಂದು ಹೊಸ ಆದೇಶವನ್ನು ಕೊಟ್ಟಿದ್ದೇವೆ. ಏಕೆಂದರೆ ನಾವು ರೋಡ್ ಪಕ್ಕಾ ಮಾಡಿ ಡಾಂಬರೀಕರಣ ಮಾಡಿದ ಮೇಲೆ ಮತ್ತೆ ನೀರು ಬಂದರೆ ರಸ್ತೆ ಹಾಳಾಗುತ್ತದೆ. ಅದರ ಬಗ್ಗೆ ಗಮನ ತೆಗೆದುಕೊಳ್ಳುತ್ತೇವೆ ಮತ್ತು ನಾನ್ ಪ್ಲಾನ್‌ನಲ್ಲಿ ೩೦ /೫ಳರಲ್ಲಿ ಒಂದೇ ವರ್ಗದಲ್ಲಿ ನಾವು ೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಹಳೆಯ ರಸ್ತೆಗಳ ಮರು ಡಾಂಬರೀಕರಣ.

ಶ್ರೀ ಪಾಟೀಲ್ ಜಿ.ಟಿ.(ಬೀಳಗಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಲೋಕೋಪಯೋಗಿ ಇಲಾಖೆಯಲ್ಲಿ ಬರತಕ್ಕಂತಹ ಡಾಂಬರೀಕರಣವಾದ ಹಳೆಯ ರಸ್ತೆಗಳ ಮರು ಡಾಂಬರೀಕರಣಕ್ಕೆ ಸರ್ಕಾರ ಏನಾದರೂ ಯೋಜನೆ ಹಾಕಿಕೊಂಡಿದೆಯೇ?

2. ನಬಾರ್ಡ್ ಯೋಜನೆಯಲ್ಲಿ ಮರು ಡಾಂಬರೀಕರಣಕ್ಕೆ ಅವಕಾಶವಿಲ್ಲವೇ?

3. ಹಳೆ ರಸ್ತೆಗಳು ಮರು ಡಾಂಬರೀಕರಣವಾಗದೇ ಇರುವುದರಿಂದ ಆ ರಸ್ತೆಗಳ ಮೇಲೆ ಸಂಚಾರ ಬಹಳ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಹಾಗಾದಲ್ಲಿ, ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಮರು ಡಾಂಬರೀಕರಣಕ್ಕೆ ಈ ಆಯವ್ಯಯದಲ್ಲಿ ಹೆಚ್ಚಿನ ಹಣ ಹಾಗೂ ಬಿಡುಗಡೆ ಮಾಡಲು ಸಾಧ್ಯವಿದೆಯೇ?

5. ಇಲ್ಲದಿದ್ದಲ್ಲಿ, ಯಾವುದಾದರೂ ವಿಶೇಷ ಯೋಜನೆಯಡಿಯಲ್ಲಿ ಈ ರಸ್ತೆಗಳ ಮರುಡಾಂಬರೀಕರಣಕ್ಕೆ ಕೈಗೆತ್ತಿಕೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಹೌದು. ಯೋಜನೆ ಹಾಕಿಕೊಂಡಿದೆ.

2. ನಬಾರ್ಡ್ ಯೋಜನೆಯಲ್ಲಿ ಮರು ಡಾಂಬರೀಕರಣಕ್ಕೆ ಅವಕಾಶವಿರುವುದಿಲ್ಲ.

3. ಮರುಡಾಂಬರೀಕರಣದ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆ.

4. ರಾಜ್ಯ ಹೆದ್ದಾರಿಯ ಮರುಡಾಂಬರೀಕರಣಕ್ಕೆ ಹುಡ್ಕೋದಿಂದ ಸಾಲ ಪಡೆದು ಕೆಲಸ ನಿರ್ವಹಿಸಲಾಗುತ್ತಿದೆ.

5. ವಿಶ್ವಬ್ಯಾಂಕ್ ಸಹಾಯದಲ್ಲಿ ಆಯ್ದ ರಾಜ್ಯ ಹೆದ್ದಾರಿಗಳನ್ನು, ಹುಡ್ಕೋ ಸಹಾಯದಲ್ಲಿ ಉಳಿದ ರಾಜ್ಯ ಹೆದ್ದಾರಿಗಳನ್ನು ಮರು ಡಾಂಬರೀಕರಣ ಸಹ ಮಾಡುವ ಯೋಜನೆಯಿದೆ.

(ಮಾನ್ಯ ಸದಸ್ಯರಾದ ಶ್ರೀ ಜಿ.ಟಿ.ಪಾಟೀಲ್ ಅವರ ಪರವಾಗಿ ಮಾನ್ಯ ಸದಸ್ಯರಾದ ಶ್ರೀ ಡಿ.ಆರ್.ಪಾಟೀಲ್ ಅವರು ಪ್ರಶ್ನೆ ಕೇಳಿದರು)

ಅಧ್ಯಕ್ಷರು: ಮಾನ್ಯ ಚಂದ್ರಶೇಖರಪ್ಪನವರೇ ನಿಮ್ಮ ಪ್ರಶ್ನೆ ಡಿಪಿಎಆರ್‌ಗೆ ಟ್ರಾನ್ಸ್‌ಫರ್ ಆಗಿದೆ. ಇನ್ನೊಮ್ಮೆ ತೆಗೆದುಕೊಳ್ಳೋಣ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಹುಡ್ಕೋ ಸಾಲದಿಂದ ರಾಜ್ಯ ಹೆದ್ದಾರಿಯ ಮರು ಡಾಂಬರೀಕರಣ ನಿರ್ವಹಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಯಾವ ಯಾವ ರಾಜ್ಯ ಹೆದ್ದಾರಿ ಕೆಲಸಗಳನ್ನು ಹುಡ್ಕೋ ಸಾಲದಿಂದ ನಡೆಯುತ್ತಿದೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು. ಹಾಗೆಯೇ 2002 ಇಸವಿ ಮೇ ಅಂತ್ಯದೊಳಗೆ ಎಲ್ಲಾ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ರಸ್ತೆಗಳ ಡಾಂಬರೀಕರಣ ಮಾಡಲು ಅವಶ್ಯಕ ಕ್ರಮವನ್ನು ತೆಗೆದುಕೊಳ್ಳುವಿರಾ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಸದಸ್ಯರು ಈಗ ಎಲ್ಲೆಲ್ಲಿ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಿದ್ದಾರೆ ಅಲ್ಲಿ ಮರು ಡಾಂಬರೀಕರಣ ಮಾಡುತ್ತೀರಾ ಎಂದು ಕೇಳಿದ್ದಾರೆ. ಈಗ ನಬಾರ್ಡ್‌ನಲ್ಲಿ ತೆಗೆದುಕೊಂಡಿರತಕ್ಕ ಕೆಲಸದಲ್ಲಿ ಮರು ಡಾಂಬರೀಕರಣಕ್ಕೆ ಅವಕಾಶವಿಲ್ಲ. ಏಕೆಂದರೆ ನಬಾರ್ಡ್‌ನವರು ಇದಕ್ಕೆ ಒಪ್ಪುತ್ತಿಲ್ಲ. ಆದರೂ ಕೂಡ ನಾವು ರಾಜ್ಯದಲ್ಲಿ ಈಗಾಗಲೇ 3600 ಕಿಲೋ ಮೀಟರ್ ಮರು ಡಾಂಬರೀಕರಣ ಮಾಡತಕ್ಕಂಥಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಮತ್ತು ಎಲ್ಲಾ ಕಡೆ ಸ್ಟೇಟ್ ಹೈವೆ 7600 ಕಿಲೋ ಮೀಟರ್‌ಗೆ ಸರಿಯಾದ ರೀತಿಯಲ್ಲಿ ರಸ್ತೆ ಮಾಡತಕ್ಕ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ.

ಶ್ರೀ ಡಿ.ಆರ್.ಪಾಟೀಲ್: ರಾಜ್ಯ ಹೆದ್ದಾರಿಯ ಮರು ಡಾಂಬರೀಕರಣ ಪೂರ್ತಿಯಾಗಿ ಆಗುತ್ತಿಲ್ಲ. ಅಲ್ಲಲ್ಲಿ ಪ್ಯಾಚ್ ವರ್ಕ್ ಮಾಡುತ್ತಿದ್ದಾರೆ. ಅಲ್ಲಲ್ಲಿ ಪಾಟ್ ಹೋಲ್ಸ್ ಫಿಲಿಂಗ್ ಮಾಡುವುದು ಆಗುತ್ತಿದೆ. ಅದಕ್ಕೆ ಪೂರ್ತಿಯಾಗಿ ಎಲ್ಲಾ ರಾಜ್ಯದ ಹೆದ್ದಾರಿಯ ಮರು ಡಾಂಬರೀಕರಣ, ಎಲ್ಲಾ ಜಿಲ್ಲಾ ರಸ್ತೆ ಮರು ಡಾಂಬರೀಕರಣ ಕಾರ್ಯವನ್ನು 2000 ಇಸವಿ ಮೇ ಅಂತ್ಯದೊಳಗೆ ಮುಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುತ್ತಾರೆಯೇ?

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ರಾಜ್ಯದಲ್ಲಿರುವ ಎಲ್ಲಾ ರಸ್ತೆಗಳೂ ಹಾಳಾಗಿವೆ. ಅವುಗಳನ್ನು ಸರಿಪಡಿಸಲು ಮರು ಡಾಂಬರೀಕರಣ ಮಾಡತಕ್ಕ ಕೆಲಸವನ್ನು ಹಾಕಿಕೊಂಡಿದ್ದೀರಾ ಎಂದು ಕೇಳಿದ್ದಾರೆ. ಅದನ್ನು ನಾವು ಮಾಡುತ್ತಿದ್ದೇವೆ, ಮತ್ತು ವಿಶ್ವ ಬ್ಯಾಂಕ್ ನೆರವಿನಿಂದ ಕೂಡ 2043 ಕಿಲೋ ಮೀಟರ್ ರಸ್ತೆ ಸರಿಯಾಗಿ ಆಗುತ್ತದೆ, ಅದನ್ನೂ ಹಾಕಿಕೊಂಡಿದ್ದೇವೆ. ಹಾಗೆಯೇ ರೋಡ್ ಮೇಂಟೆನೆನ್ಸ್ ಮಾಡತಕ್ಕ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ಫಿಲಿಂಗ್ ಆಫ್ ಆಫ್ ಪಾಟ್ ಹೋಲ್ಸ್ ಡ್ರೈನ್ಸ್ ಮಾಡತಕ್ಕ ಕಾರ್ಯಕ್ರಮ ಕೂಡ ಹಾಕಿಕೊಂಡಿದ್ದೇವೆ. 2000ನೇ

ಇಸವಿ ಮೇ ಅಂತ್ಯದೊಳಗೆ ರಾಜ್ಯದಲ್ಲಿ ಮಾಡತಕ್ಕ ಕೆಲಸದ ಬಗ್ಗೆ ಇವತ್ತು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕ 41000 ಕಿಲೋ ಮೀಟರ್ ಇದೆ, ಹೀಗೆ ಒಂದೊಂದಾಗಿ ತೆಗೆದುಕೊಳ್ಳತಕ್ಕ ಕಾರ್ಯಕ್ರಮ ಇದೆ ಮತ್ತು ಸಮರ್ಪಕವಾಗಿ ಮಾಡತಕ್ಕಂಥ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಈ ನಬಾರ್ಡ್ ಯೋಜನೆಯಲ್ಲಿ ಮಾಡಿದಂತಹ ರಸ್ತೆಗಳಿಗೆ ಮರು ಡಾಂಬರೀಕರಣ ಯೋಜನೆ ಇಲ್ಲ ಎಂದು ಹೇಳುತ್ತಿದ್ದಾರೆ. ಹೋದ ಸದನದಲ್ಲಿ ತಮ್ಮನ್ನು ನಾನು ಒಂದು ಪ್ರಶ್ನೆ ಕೇಳಿದ್ದೆ. ನಬಾರ್ಡ್ ಯೋಜನೆಯಲ್ಲಿ ಮಾಡಿದಂತಹ ಯೋಜನೆಗಳನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳುತ್ತೀರಾ ಎಂದು ಪ್ರಶ್ನೆ ಕೇಳಿದ್ದೆ. ತಾವು ಅದರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಅದನ್ನು ತಾವು ರಿಪೇರಿ ಮಾಡದೇ ಇದ್ದರೆ ಸಂಪೂರ್ಣವಾಗಿ ನಾವು ನಬಾರ್ಡ್‌ನಿಂದ ಸಾಲ ತಂದು ಮಾಡಿದ ರಸ್ತೆಯೆಲ್ಲಾ ಹಾಳಾಗಿ ಹೋಗುತ್ತವೆ. ಆ ಕಾರಣದಿಂದ ತೀವ್ರದಲ್ಲಿಯೇ ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಂಡು ರಿಪೇರಿ ಮಾಡುತ್ತೀರಾ ಎಂದು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್: ಈಗಾಗಲೇ ನಬಾರ್ಡ್ ಕೆಲಸಗಳನ್ನು ಲೋಕೋಪಯೋಗಿ ಇಲಾಖೆವತಿಯಿಂದ ಮಾಡುತ್ತಿದ್ದೇವೆ. ಮೇಂಟಿನೆನ್ಸ್ ಯಾರು ಮಾಡಬೇಕೆಂಬ ಬಗ್ಗೆ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಈಗಾಗಲೇ ಜಿಲ್ಲಾ ಪಂಚಾಯಿತಿಗೆ ಕೊಡಿಸುವಂತಹ ವಿಚಾರದ ಬಗ್ಗೆ ಸಮಗ್ರವಾಗಿ ವಿಚಾರ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ನಬಾರ್ಡ್ ಯೋಜನೆಯಲ್ಲಿದ್ದ ರಸ್ತೆಯನ್ನು ಅಗಲಗೊಳಿಸುವ ಕೆಲಸವನ್ನು ತೆಗೆದುಕೊಂಡು ಈಗಾಗಲೇ ಮಾಡಿ ಆಗಿದೆ. ಆದರೆ ಹಳೆಯ ರಸ್ತೆಗಳು ಮಧ್ಯದಲ್ಲಿರುವಂಥದ್ದು ಕಿತ್ತು ಹೋಗಲಿಕ್ಕೆ ಶುರು ಆಗಿದೆ. ಪುನಃ ಅದರ ಕೆಲಸವನ್ನು ನಬಾರ್ಡ್‌ನಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೋ ಅಥವಾ ಹುಡ್ಕೋ ಯೋಜನೆಯಲ್ಲಿ ಏನಾದರೂ ತೆಗೆದುಕೊಳ್ಳುತ್ತಾರಾ ಎಂಬುದನ್ನು ಸಚಿವರು ತಿಳಿಸಬೇಕು. ರಸ್ತೆಗಳನ್ನು ಮಾಡುವಾಗ ಅದರೊಟ್ಟಿಗೆ ಡ್ರೈನೇಜನ್ನು ಮಾಡಲಿಕ್ಕೆ ಅವಕಾಶವನ್ನು ಇಟ್ಟುಕೊಂಡರೆ ಮಾತ್ರ ರಸ್ತೆಗಳು ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿದದ್ದರೆ ರಸ್ತೆ ಉಳಿಯುವುದಿಲ್ಲ.

ಅಧ್ಯಕ್ಷರು: ಅದು ವಾಸ್ತವಾಂಶ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಅದಕ್ಕೇನಾದರೂ ಸರ್ಕಾರ ಕಾರ್ಯಕ್ರಮವನ್ನು

ಹಾಕಿಕೊಂಡಿದ್ದಾರಾ ಎಂದು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್: ರಸ್ತೆಗಳನ್ನು ಮಾಡತಕ್ಕ ರೀತಿಯಲ್ಲಿ, ನಾವು ಡ್ರೈನ್ ಮಾಡೇ ರಸ್ತೆಗಳನ್ನು ಮಾಡಿದರೆ ರಸ್ತೆ ಉಳಿಯುತ್ತದೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ವಿ.ಕೃಷ್ಣಪ್ಪ: ಕೋಲಾರ-ಸೋಮಪುರದ ರಸ್ತೆ ಟೆಂಡರ್ ಆಗಿ ಸುಮಾರು 4-5 ವರ್ಷಗಳಾಗಿದೆ. ಕಳೆದ ಸಾಲಿನಲ್ಲಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಆದರೂ ಕೆಲಸವನ್ನು ನಿಲ್ಲಿಸಿದ್ದಾರೆ.

ಅಧ್ಯಕ್ಷರು: ನೀವು ಪ್ರತ್ಯೇಕವಾದಂತಹ ಪ್ರಶ್ನೆ ಕೇಳಿ. ಇದು ಟೋಟಲ್ ನಬಾರ್ಡ್ ವರ್ಕ್ಸ್, ನೀವು ಕೋಲಾರ ಎಂದು ಹೇಳುತ್ತಿದ್ದೀರಿ, ಜನರಲ್ ಆಗಿ ಕೇಳಿ.

ಶ್ರೀ ವಿ.ಕೃಷ್ಣಪ್ಪ: ಈಗ ನಾಲ್ಕೈದು ವರ್ಷಗಳಿಂದ ರಸ್ತೆಗಳು ಕೆಟ್ಟು ಹೋಗಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ನಬಾರ್ಡ್‌ನಿಂದ ಆಗದೇ ಇರುವಂತಹ ಕೆಲಸ, ನಬಾರ್ಡ್‌ನಿಂದ ಸ್ಥಗಿತವಾಗಿರುವಂತಹ ಕೆಲಸ, ಆ ತರಹದ್ದು ನೀವು ಮಾಡಿ.

ಶ್ರೀ ಧರ್ಮಸಿಂಗ್: ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾದಂತಹ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಗುಂಡಪ್ಪ ವಕೀಲ್: ಔರಾದ್ ತಾಲ್ಲೂಕಿನಲ್ಲಿ ಮಹಾರಾಷ್ಟ್ರದ ಲೋಕೋಪಯೋಗಿ ಸಚಿವರು ನೆಂಟಸ್ಥನಕ್ಕೆ ಬಂದು ನನಗೆ ಕಾರ್‌ನಲ್ಲಿ ತಿರುಗಾಡಲಿಕ್ಕೆ ಆಗಿಲ್ಲ, ದಯಮಾಡಿ ಇದನ್ನು ರಿಪೇರಿ ಮಾಡಿಸಿಕೊಡಿ ಎಂದು ಕೇಳಿದ್ದಾರೆ, ಮಹಾರಾಷ್ಟ್ರ ಸರ್ಕಾರದ ಲೋಕೋಪಯೋಗಿ ಇಲಾಖಾ ಸಚಿವರು ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆ ಪತ್ರ ಬಂದಿದೆಯೋ ಅಥವಾ ಇಲ್ಲವೋ? ಬಂದರೆ ಏನು ಮಾಡುತ್ತೀರಿ? ದಯಮಾಡಿ ಸ್ವಲ್ಪ ತಿಳಿಸಬೇಕು.

ಶ್ರೀ ಧರ್ಮಸಿಂಗ್: ಈಗ ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ಇರತಕ್ಕಂಥಹ ರಸ್ತೆ ನಮ್ಮ ರಸ್ತೆಗೆ ಕೂಡ ಸಾಕಷ್ಟು ಸ್ವಲ್ಪ ಅಂತರ ಇದೆ. ಅದನ್ನು ನಾವು ಮಾಡಬೇಕಾಗಿದೆ. ಆ ಪತ್ರ ಬಂದಿದೆ. ನಾವೆಲ್ಲ ಗಮನಕ್ಕೆ ತೆಗೆದುಕೊಂಡಿದ್ದೇವೆ. ಮತ್ತು ಸೆಂಟ್ರಲ್ ರೋಡ್ ಫಂಡಿನ ಇತರ ಕಾರ್ಯಕ್ರಮದಲ್ಲಿ ಔರಾದ್‌ನಲ್ಲಿ ಕೆಲಸ ಮಾಡತಕ್ಕಂಥಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಮಂತ್ರಿಗಳು ಈಗ ಡಿಸ್ಟ್ರಿಕ್ಟ್ ಪ್ಯಾಕೇಜ್‌ನಲ್ಲಿ

ಸ್ಟೇ ಹೈವೇಸ್‌ಗೆ ಏನೋ ಟೆಂಡರ್ ಕರೆದಿದ್ದಾರೆ. ಆದರೆ ಒಂದೊಂದು ಜಿಲ್ಲೆಯಲ್ಲಿ ಅವರು ಸ್ಟೇಟ್ ಹೈವೇಸ್‌ಗೆ ಮರು ಡಾಂಬರೀಕರಣ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೆ ಕೊಪ್ಪಳ ಜಿಲ್ಲೆಯಲ್ಲಿ ಒಂದು ಫರ್ಲಾಂಗ್ ಕೂಡ ಸ್ಟೇಟ್ ಹೈವೇಯ ಮರು ಡಾಂಬರೀಕರಣ ಪ್ರಪೋಸಲ್ ಮಾಡಿಲ್ಲ ಇದರಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೋ ಅಥವಾ ತಾವೇನಾದರೂ ಆದೇಶ ಆ ರೀತಿ ಕೊಟ್ಟಿದ್ದೀರೋ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು: ನೀವು ಸೆಪರೇಟ್ ಕ್ವೆಶ್ಚನ್ ಕೇಳಿ. ಅದಕ್ಕೆ ಉತ್ತರ ಹೇಳುತ್ತಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಡಿಸ್ಟ್ರಿಕ್ಟ್ ಪ್ಯಾಕೇಜಿನ ಕಾರ್ಯಕ್ರಮದಲ್ಲಿ ಇಡೀ ರಾಜ್ಯದಲ್ಲಿ ಕರೆದಿದ್ದಾರೆ. ಆದರೆ ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಇಲ್ಲ. ಇದು ಲೋಕೋಪಯೋಗಿ ಮಂತ್ರಿಗಳಿಗೆ ಸಂಬಂಧ ಇದೆ.

ಅಧ್ಯಕ್ಷರು: ನೀವು ಪ್ರತ್ಯೇಕವಾದಂತಹ ಪ್ರಶ್ನೆಯನ್ನು ಕಳಿಸಿ ಉತ್ತರವನ್ನು ಮಾನ್ಯ ಮಂತ್ರಿಗಳಿಂದ ಪಡೆದುಕೊಳ್ಳಿ.

ಶ್ರೀ ಧರ್ಮಸಿಂಗ್: ಅಧಿಕಾರಿಗಳ ವರದಿಯ ಆಧಾರದ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ರೀಸರ್ಫೇಸಿಂಗ್ ಮಾಡತಕ್ಕದ್ದು, ವೈಡ್‌ನಿಂಗ್ ಆಫ್ ದಿ ರೋಡ್ಸ್ ಮಾಡತಕ್ಕದ್ದು ಫಿಲಿಂಗ್ ಆಪ್ ಆಫ್ ದಿ ಪಾಟ್ ಹೋಲ್ಸ್ ಮಾಡತಕ್ಕದ್ದು ಇದರ ಬಗ್ಗೆ ಕ್ರಮ ತೆಗೆದು ಕೊಂಡಿದ್ದೇವೆ. ಕೊಪ್ಪಳದಲ್ಲಿ ಕೂಡ ಮೂರು ಕೋಟಿ ರೂಪಾಯಿ ವೆಚ್ಚದ ಮೇಲೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಸ್ಟೇಟ್ ಹೈವೇ ಅಂತಲ್ಲ, ಯಾವುದನ್ನೂ ಮೂವ್ ಮಾಡಿಲ್ಲ.

ಶ್ರೀ ಧರ್ಮಸಿಂಗ್: ಸ್ಟೇಟ್ ಹೈವೇ ಎಂತಲ್ಲ, ಯಾವ ಸ್ಟೇಟ್ ಹೈವೇ ಯೋಜನೆ ವಿಶ್ವ ಬ್ಯಾಂಕ್ ಯೋಜನೆಯಲ್ಲಿ ಬರುತ್ತದೋ ಅದರ ಬಗ್ಗೆ ಕ್ರಮ ಕೈಗೊಂಡಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಈ ತರಹ ಅನ್ಯಾಯ ಆದರೆ ಹೇಗೆ?

ಧರ್ಮಸಿಂಗ್: ಅನ್ಯಾಯ ಅಲ್ಲ,. ನಮ್ಮ ಜೇವರಿಗಿ ಕ್ಷೇತ್ರದಲ್ಲಿ ಒಂದೂ ಕೂಡ ಅದರಲ್ಲಿ ಸೇರಿಲ್ಲ. ಏಕೆಂದರೆ ವಿಶ್ವ ಬ್ಯಾಂಕ್ ಯೋಜನೆಯಿಂದ ಸೇರ್ಪಡೆ ಆಗಿದೆ. ವಿಶ್ವ ಬ್ಯಾಂಕ್ ಯೋಜನೆಯಲ್ಲಿ ನಾವು ಯಾವ್ಯಾವ ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದೇವೆ, ಅಲ್ಲಿ ಸೇರ್ಪಡೆ ಮಾಡಿದ್ದೇವೆ.

ಶ್ರೀ ಕೆ.ಬಿ.ಕೋಳೀವಾಡ್: ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ರಸ್ತೆಯ

ಮೇಂಟೆನೆನ್ಸ್‌ಗಾಗಿ ಒಂದು ಕಿಲೋ ಮೀಟರ್‌ಗೆ ಪ್ರತಿ ವರ್ಷ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ? ಅಷ್ಟು ಹಣವನ್ನು ಸರಿಯಾಗಿ ಖರ್ಚು ಮಾಡಿದ್ದರೆ ಇವು ಪುನಃ ರಿಪೇರಿಗೆ ಬರಲಿಕ್ಕೆ ಸಾಧ್ಯವೇ? ಇದನ್ನು ತಾವು ಹೇಳಬೇಕು.

ಶ್ರೀ ಧರ್ಮಸಿಂಗ್: ಮಾನ್ಯ ಸದಸ್ಯರಾದಂತಹ ಕೋಳೀವಾಡ್ ಕೇಳಿದಂತಹ ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ ನಾವು ರೋಡ್ ಮೇಂಟೆನೆನ್ಸ್‌ಗೆ ಕೇವಲ 25 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈಗ ನಮ್ಮ ಸರ್ಕಾರ ಬಂದ ಮೇಲೆ ನಾವು 50 ಸಾವಿರಕ್ಕೆ ಹೆಚ್ಚು ಮಾಡಿದ್ದೇವೆ. ಸ್ವಲ್ಪ ಕೆಲಸ ಮಾಡಲಿಕ್ಕೆ ಅನುಕೂಲ ಆಗುತ್ತದೆ. 25 ಸಾವಿರ ರೂಪಾಯಿ ಇದ್ದಂತಹ ಮೇಂಟೆನೆನ್ಸ್ ಹಣವನ್ನು 50 ಸಾವಿರ ರೂಪಾಯಿಗಳಿಗೆ ನಾವು ಏರಿಸಿದ್ದೇವೆ.

ಶ್ರೀ ಡಿ.ಆರ್.ಪಾಟೀಲ್: ಬಂಕಾಪುರ್ ಕ್ರಾಸಿನಿಂದ ಸವಣೂರು, ಲಕ್ಕ್ಷೇಶ್ವರ, ಗದಗ್, ರೋಣ್, ಬಾದಾಮಿ, ಬಾಗಲಕೋಟೆಯ ಮೇಲೆ ಹಾಯ್ದು ಗದ್ದನಕೆರೆ ಕ್ರಾಸ್‌ವರೆಗೆ ಎರಡೂ ನ್ಯಾಷನಲ್ ಹೈವೇ ಕನೆಕ್ಟ್ ಮಾಡುವಂತಹ ರೋಡ್. ಈ ರೋಡ್ ಚೆನ್ನಾಗಿ ಆಯಿತು ಅಂದರೆ ಅಲ್ಲಿ ವ್ಯವಹಾರ, ಉದ್ಯಮ ಮತ್ತು ಪ್ರಾವಾಸೋದ್ಯಮದ ಬೆಳವಣಿಗೆ ಸಾಕಷ್ಟು ಅನುಕೂಲ ಆಗುತ್ತದೆ. ಅದಕ್ಕೆ ದಯವಿಟ್ಟು ಮುಂದಿನ ವರ್ಷ ಆದ್ಯತೆಯ ಮೇಲೆ ಈ ಮರು ಡಾಂಬರೀಕರಣ ಕೆಲಸ ಮತ್ತು ಮೇಲ್ದರ್ಜೆಗೆ ಏರಿಸುವಂತಹ ಕೆಲಸವನ್ನು ಕೈಗೊಳ್ಳುತ್ತೀರಾ ಎಂದು ತಿಳಿಸಬೇಕು.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇದರಲ್ಲೇ ಉಪಪ್ರಶ್ನೆ ಮಾನ್ಯ ಸದಸ್ಯರದ್ದು ಇದೆಯೋ ಅಥವಾ ಯಾವಗಲ್ ಅವರ ಪ್ರಶ್ನೆಯನ್ನು ಕೇಳುತ್ತಿದ್ದೀರೋ?

ಶ್ರೀ ಡಿ.ಆರ್.ಪಾಟೀಲ್: ಜಿ.ಟಿ.ಪಾಟೀಲ್ ಅವರದ್ದೇ ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್: ಈಗಾಗಲೇ 192 ಕಿಲೋಮೀಟರ್‌ಗಳ ಹುಬ್ಬಳ್ಳಿ-ಬಿಜಾಪುರ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:218 ಡಿಕ್ಲೇರ್ ಆಗಿದೆ. ನವಲಗುಂದ-ನರಗುಂದ-ಗದ್ದನಕೇರಿ ಕ್ರಾಸ್‌ನಿಂದ ಹುಬ್ಬಳ್ಳಿಗೆ ಹೋಗುವಂಥದ್ದಾಗಿದೆ. ಈ ವರ್ಷ ಸುಮಾರು ಇಪ್ಪತ್ತೈದು ಕೋಟಿ ರೂಪಾಯಿಗಳ ಅಂದಾಜು ಪ್ರಸ್ತಾಪವನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದು, ಅಲ್ಲಿಂದ ಒಪ್ಪಿಗೆ ಬಂದ ತಕ್ಷಣವೇ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಡಿ.ಆರ್.ಪಾಟೀಲ್: ಗದ್ದನಕೇರಿ ಕ್ರಾಸ್‌ನಿಂದ ಸವಣೂರು - ಲಕ್ಕ್ಷೇಶ್ವರ - ಗದಗ - ರೋಣ - ಬಾದಾಮಿ - ಬಾಗಲಕೋಟೆ - ಗದ್ದನಕೇರಿ ಈ ರಸ್ತೆಗಳಿಗೆ ನೀವು

ಮರು ಡಾಂಬರೀಕರಣ ಮಾಡಲು ಆದ್ಯತೆ ಮೇರೆಗೆ ಮುಂದಿನ ವರ್ಷ ಕೈಗೊಳ್ಳುತ್ತೀರಾ?

ಶ್ರೀ ಧರ್ಮಸಿಂಗ್: ಈ ಕುರಿತು ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಜಿ.ಚನ್ನಿಗಪ್ಪ: ನಾನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಒಂದು ಪ್ರಶ್ನೆ ಕೇಳುವುದೇನೆಂದರೆ, ತುಮಕೂರು ಜಿಲ್ಲೆಯಲ್ಲಿ ರಸ್ತೆಗಳ ಸುಧಾರಣೆಗೆ ಹಣವನ್ನು ಮಂಜೂರು ಮಾಡಿದ್ದರೂ, ಲೋಕೋಪಯೋಗಿ ಇಲಾಖೆಯ ರಸ್ತೆಗಳ ಇಕ್ಕೆಲಗಳು ಮಳೆಗಾಲದಲ್ಲಿ ಹಾಳಾಗಿದ್ದರೂ ಮಣ್ಣು ಹಾಕಿರುವುದಿಲ್ಲ. ಇದರಿಂದಾಗಿ ಇತ್ತೀಚೆಗೆ ಅಲ್ಲಿ ಅಪಘಾತ ಸಂಭವಿಸಿ 3-4 ಜನರು ಸತ್ತಿದ್ದಾರೆ. ಪಾವಗಡ - ತುಮಕೂರು - ಮಧುಗಿರಿ ರಸ್ತೆಗಳು ಸಹ ಇದೇ ರೀತಿ ಹಾಳಾಗಿರುವುದರಿಂದ ಅಪಘಾತವಾಗುವ ಸಂಭವವಿರುವುದರಿಂದ ಗ್ಯಾಂಗ್‌ಮನ್‌ಗಳನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಂಡು ಹಾಳಾಗಿರುವ ರಸ್ತೆಗಳಿಗೆ ಮಣ್ಣು ಹಾಕಿಸಿದರೆ ಬಹಳ ಅನುಕೂಲವಾಗುತ್ತದೆ.

ಡಾ: ವೈ.ನಾಗಪ್ಪ: ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಒಂದು ಕಿಲೋಮೀಟರ್ ರಸ್ತೆಯ ನಿರ್ವಹಣೆಗೆ ನೀಡಲಾಗುತ್ತಿದ್ದ ಹಣವನ್ನು ಇಪ್ಪತ್ತೈದು ಸಾವಿರ ರೂಪಾಯಿಗಳಿಂದ ಐವತ್ತು ಸಾವಿರ ರೂಪಾಯಿಗಳವರೆಗೆ ಹೆಚ್ಚಿಸಲಾಗಿದೆಯೆಂದು ಏನು ಹೇಳಿದ್ದಾರೆ, ಶಾಸಕರುಗಳಾದ ನಾವುಗಳು ವಿಡಿಯೋ ಕ್ಯಾಸೆಟ್ ತಂದು ತೋರಿಸುತ್ತೇವೆ. ಅನಂತರ, ಅವರು ರಸ್ತೆಗಳ ನಿರ್ವಹಣೆಗೆ ಎಷ್ಟು ಹಣ ಖರ್ಚು ಮಾಡಿದ್ದೇವೆ, ಎಷ್ಟು ಖರ್ಚು ಮಾಡುತ್ತೇವೆ ಎಂಬುದನ್ನು ಹೇಳಲಿ. ಇವೊತ್ತು ಕೆಲವು ರಸ್ತೆಗಳ ಸುಧಾರಣೆಗೆ ಹತ್ತು ಪೈಸೆಯಷ್ಟು ಹಣವನ್ನೂ ಖರ್ಚು ಮಾಡಿಲ್ಲ

ಶ್ರೀ ಧರ್ಮಸಿಂಗ್: ಮಾನ್ಯ ಸದಸ್ಯರಾದ ಚನ್ನಿಗಪ್ಪನವರು ಮಾತನಾಡುತ್ತಾ ತುಮಕೂರು ಜಿಲ್ಲೆಯಲ್ಲಿ ಮಳೆಗಾಲದಲ್ಲಿ ರಸ್ತೆಗಳ ಇಕ್ಕೆಲಗಳು ಹಾಳಾಗಿದ್ದು, ಅಪಘಾತ ಸಂಭವಿಸುತ್ತಿರುವುದರಿಂದ ಗ್ಯಾಂಗ್‌ಮನ್‌ಗಳನ್ನು ನೇಮಕ ಮಾಡಿಕೊಂಡು ಮಣ್ಣು ತುಂಬಿಸುವ ಕೆಲಸ ಕೈಗೆತ್ತಿಕೊಳ್ಳಬೇಕೆಂದು ಏನು ಹೇಳಿದ್ದಾರೆ, ಬೆಂಗಳೂರಿನಿಂದ ತುಮಕೂರುವರೆಗಿರುವ ಬಹಳಷ್ಟು ರಸ್ತೆಗಳನ್ನು ಸುಧಾರಿಸುವ ಸಲುವಾಗಿ ಇಲಾಖೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯೂ ನಡೆಯುತ್ತಿದೆ. ಇನ್ನು ಗ್ಯಾಂಗ್‌ಮನ್ ವಿಚಾರ ತಾವು ಏನು ಹೇಳಿದ್ದೀರಿ, ಇದನ್ನು ಪರಿಶೀಲಿಸುತ್ತಿದ್ದೇವೆ. ಮತ್ತೊಬ್ಬ ಮಾನ್ಯ ಸದಸ್ಯರಾದ ನಾಗಪ್ಪನವರು ಮಾತನಾಡುತ್ತಾ ರಸ್ತೆಗಳ ಸುಧಾರಣೆಗೆ ಹತ್ತು ಪೈಸೆಯಷ್ಟೂ ಖರ್ಚು ಮಾಡುತ್ತಿಲ್ಲವೆಂದು ಏನು ಹೇಳಿದ್ದಾರೆ, ಇಲಾಖಾಧಿಕಾರಿಗಳು ಎಲ್ಲೆಲ್ಲಿ ಈ ಕುರಿತು ಕೆಲಸ ಮಾಡಿಲ್ಲವೋ ಅದರ

ಬಗ್ಗೆ ತನಿಖೆ ಮಾಡೋಣ. ಆದರೆ, ಇದು ಪ್ರತ್ಯೇಕ ಪ್ರಶ್ನೆಯಾಗಿದೆ.

ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಬಸವ ಜನ್ಮಭೂಮಿಯ ಪ್ರಾಧಿಕಾರ ರಚನೆ.

65(892)

ಶ್ರೀ ಜೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ): ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಬಾಗೇವಾಡಿ ತಾಲ್ಲೂಕು ಇಂಗಳೇಶ್ವರದಲ್ಲಿ ರಾಜ್ಯ ಸರ್ಕಾರವು ಬಸವ ಜನ್ಮಭೂಮಿ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಯೋಜಿಸಿದೆಯೇ?

ಆ) ಯೋಜಿಸಿದ್ದಲ್ಲಿ ಸದರಿ ಪ್ರಾಧಿಕಾರ ಯಾವಾಗಿನಿಂದ ಕಾರ್ಯಾರಂಭ ಮಾಡುವುದು.

ಇ) ಈ ಪ್ರಾಧಿಕಾರ ಹಾಲಿ ಅಸ್ತಿತ್ವದಲ್ಲಿಯೇ ಇದ್ದಲ್ಲಿ ಇದಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು?

ಈ) ಸದರಿ ಅಭಿವೃದ್ಧಿ ಪ್ರಾಧಿಕಾರಕ್ಕೂ ಹಾಗೂ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರಕ್ಕೂ ವ್ಯತ್ಯಾಸವಿದೆಯೇ ಇದ್ದಲ್ಲಿ ಅವು ಯಾವುವು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಬಸವನ ಬಾಗೇವಾಡಿ, ಬಸವ ಕಲ್ಯಾಣ ಕ್ಷೇತ್ರ ಹಾಗೂ ಕೂಡಲ ಸಂಗಮ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಕೂಡಲ ಸಂಗಮ ಕ್ಷೇತ್ರ ಎಂಬುದರ ಬದಲಿಗೆ ಬಸವ ಸಂಗಮಕ್ಷೇತ್ರವೆಂದು ಪರಿವರ್ತಿಸಲು ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ 94ಕ್ಕೆ ಸೂಕ್ತ ತಿದ್ದುಪಡಿ ಮಾಡಲು ಪರಿಶೀಲಿಸಲಾಗುತ್ತಿದೆ.

ಆ) ಕೂಡಲಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ 94ಕ್ಕೆ ತಿದ್ದುಪಡಿ ಮಾಡಿದ ನಂತರ ಕಾರ್ಯಾರಂಭ ಮಾಡಲಾಗುವುದು.

ಇ) ಪ್ರಾಧಿಕಾರ ಅಸ್ತಿತ್ವದಲ್ಲಿ ಇಲ್ಲದೆ ಇರುವುದರಿಂದ ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.